ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):

ಅ) ಹೌದು.

ಆ) ಇಲ್ಲ.

ಇ) ಹೌದು, ನಿಜ.

ಈ) ಇಲ್ಲ.

ಬೆಂಗಳೂರಿನ ವಕೀಲರ ಸಂಘದ ಸಹಕಾರ ಸಂಘದಲ್ಲಿ ಸ್ಟಾಂಪ್ ಕಾಗದದ ಮಾರಾಟ

700- ಶ್ರೀ ರಾಮಲಿಂಗಾ ರೆಡ್ಡಿ, (ಜಯನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ವಕೀಲರ ಸಂಘದ ಸಹಕಾರ ಸಂಘದಲ್ಲಿ ಪ್ರತಿದಿನ ಸರಾಸರಿ ಮಾರಾಟವಾಗುವ ಸ್ಟಾಂಪ್ ಕಾಗದದ ಮೊತ್ತವೆಷ್ಟು?

ಆ) ಈ ಸಂಘದಲ್ಲಿ ಕೇವಲ 50,000-00 ರೂ.ಗಳವರೆಗೆ ಮಾತ್ರ ಸ್ಟಾಂಪ್ ಕಾಗದ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬೆಂಗಳೂರು ನಗರದಲ್ಲಿ ನಿವೇಶನ ಅಥವಾ ಮನೆ ಖರೀದಿ ಮಾಡಬೇಕಾದರೆ ಅದರ ಮೌಲ್ಯ 50,000 ರೂ.ಗಳಿಗಿಂತ ಹೆಚ್ಚಿರುವುದರಿಂದ ಈ ಸಹಕಾರ ಸಂಘದಲ್ಲಿ 3.00 ಲಕ್ಷ ರೂ.ಗಳವರೆಗೆ ಸ್ಟಾಂಪ್ ಕಾಗದ ನೀಡಲು ಸರ್ಕಾರದ ಅನುಮತಿ ನೀಡುತ್ತದೆಯೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು)

ಅ) ಬೆಂಗಳೂರಿನ ವಕೀಲರ ಸಂಘದ ಸಹಕಾರ ಸಂಘದವರು ಪ್ರತಿ ದಿನ ಸರಾಸರಿ 25 ರಿಂದ 30.00 ಲಕ್ಷ ರೂ.ಗಳ ಮೊತ್ತದ ಮುದ್ರಾಂಕ ಪತ್ರಗಳನ್ನು ಮಾರಾಟ ಮಾಡುತ್ತಿರುತ್ತಾರೆ.

ಆ) ಹೌದು.

ಇ) ಒಂದು ವೇಳೆ ಮುದ್ರಾಂಕ ಶುಲ್ಕದ ಬೆಲೆಯ 50,000-00 ರೂ.ಗಳು ಮೀರಿದರೆ, ಈ ಶುಲ್ಕವನ್ನು ಮುದ್ರಾಂಕ ಭಂಡಾರದ ಉಪ-ನಿರ್ದೇಶಕರು, ಬೆಂಗಳೂರು, ರವರ ಮೂಲಕ ಕೊಡಲು ಅವಕಾಶ ಇದೆ. ಆದ್ದರಿಂದ, ಈ ತರಹ ಅನುಮತಿ ನೀಡುವ ಪ್ರಮೇಯ ಇರುವುದಿಲ್ಲ.

ಲಾಲ್‌ಬಾಗ್ ಕೆರೆಯಲ್ಲಿ ಮೀನುಗಳು ಸತ್ತು ಹೋಗಿರುವ ಬಗ್ಗೆ

697-ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಲಾಲ್‌ಬಾಗ್ ಕೆರೆಯಲ್ಲಿ ಇತ್ತೀಚೆಗೆ ಮೀನುಗಳು ಸತ್ತಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ಲಾಲ್‌ಬಾಗ್ ಕೆರೆಗೆ ಚರಂಡಿ ನೀರು ಹರಿದು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಈ) ಹಾಗಿದ್ದಲ್ಲಿ ಇದನ್ನು ನಿಲ್ಲಿಸಲು ಕೈಗೊಂಡ ಕ್ರಮಗಳೇನು?

ಉ) ಲಾಲ್‌ಬಾಗ್ ಕೆರೆಯಲ್ಲಿ ಜೊಂಡು ಬೆಳೆದಿದ್ದು ನೀರು ಕಲುಷಿತವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ?

ಊ) ಹಾಗಿದ್ದಲ್ಲಿ ಲಾಲಬಾಗ್ ಕೆರೆಯನ್ನು ಸ್ವಚ್ಛಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ಸಚಿವರು)

ಅ) ಹೌದು.

ಆ) ಲಾಲ್‌ಬಾಗ್ ಸಸ್ಯ ತೋಟದ ಕೆರೆಯಲ್ಲಿನ ನೀರಿನಲ್ಲಿ ಪ್ರಿ ಅಮೋನಿಯ ಅಂಶ (೧.೬ ಮಿ.ಗ್ರಾಂ: 1 ಲೀಟರ್ ನೀರಿನಲ್ಲಿ) ಜಾಸ್ತಿ ಆಗಿದ್ದ ಪ್ರಯುಕ್ತ ಥಿಲೋಪಿಯಾ ಜಾತಿಯ ಮೀನುಗಳು ಸತ್ತಿರುವುದಾಗಿ ವರದಿಯಾಗಿರುತ್ತದೆ.

ಇ) ಹೌದು

ಈ) ಈ ಕೆರೆಗೆ ಚರಂಡಿ ನೀರು ಬರುತ್ತಿರುವುದನ್ನು ತಡೆಗಟ್ಟಲು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಕಾರ್ಪೋರೇಷನ್ ಅಧಿಕಾರಿಗಳಿಗೆ ಪತ್ರ ವ್ಯವಹಾರ ಮಾಡಲಾಗಿದ್ದು, ಬೆಂಗಳೂರು, ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಯವರು ಕೊಳಚೆ ನೀರು ಹರಿದು ಬರುವುದನ್ನು ತಡೆಗಟ್ಟಲು ಸೂಕ್ತ ಕ್ರಮ ಕೈಗೊಳ್ಳುತ್ತಿದ್ದಾರೆ.

ಉ) ಹೌದು.

ಊ) ಲಾಲ್‌ಬಾಗ್ ಸಸ್ಯ ತೋಟದ ಕೆರೆಯಲ್ಲಿ ಬೆಳೆದಿರುವ ಜೊಂಡು ಹುಲ್ಲನ್ನು ಈಗಾಗಲೇ ತೆಗೆಸಲಾಗಿದೆ. ಹಾಗೂ ಮುಂದೆ ಆಗಿಂದಾಗ್ಗೆ ಕೆರೆಯಲ್ಲಿ ಬೆಳೆಯುವ ಜೊಂಡು ಹುಲ್ಲನ್ನು ಆಗಿಂದಾಗ್ಗೆ ತೆಗೆಯಲು ಕ್ರಮ ತೆಗೆದುಕೊಳ್ಳಲಾಗುವುದು.

ಹಾಪ್‌ಕಾಮ್ಸ್ ಮಳಿಗೆಗಳ ಕುರಿತು

698-ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಒಟ್ಟು ಹಾಪ್‌ಕಾಮ್ಸ್ ಮಳಿಗೆಗಳೆಷ್ಟು?

ಆ) ಈ ಮಳಿಗೆಗಳ ಪೈಕಿ ಎಷ್ಟು ಮಳಿಗೆಗಳ ಲಾಭದಾಯಕವಾಗಿ ಕೆಲಸ ಮಾಡುತ್ತಿವೆ?

ಇ) ಈ ಮಳಿಗೆಗಳಿಗಾಗಿ ಪ್ರತಿ ವರ್ಷ ಆಗುತ್ತಿರುವ ಒಟ್ಟು ವೆಚ್ಚ ಎಷ್ಟು?

ಈ) ಈ ಮಳಿಗೆಗಳಲ್ಲಿ ಗ್ರಾಹಕರಿಗೆ ಕೊಳೆತ ತರಕಾರಿಗಳನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಈ ಮಳಿಗೆಗಳಲ್ಲಿ ಮಾರಾಟವಾಗುತ್ತಿರುವ ತರಕಾರಿ ಬೆಲೆಯು ಮಾರುಕಟ್ಟೆ ಬೆಲೆಗಿಂತ ಹೆಚ್ಚಾಗಿ ಇರುವುದು ಸರ್ಕಾರದ ಗಮನಕ್ಕೆ ಕಂಡು ಬಂದಿದೆಯೇ?